**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :13 ಸಿಡಬ್ಲು :16

ಸಾಕ್ಷಿಯ ಹೆಸರು : ಶ್ರೀ.ಭೀಮಪ್ಪ ಯಮನಪ್ಪ ಮಾದರ
ತಾಯಿಯ ಹೆಸರು : ಶ್ರೀ.ಯಮನಪ್ಪ ಮಾದರ
ವಯಸ್ಸು : 55 ವರ್ಷ
ಉದ್ಯೋಗ : ವ್ಯವಸಾಯ
ವಾಸ್ತವ್ಯ : ಮುಗಳಖೋಡ
ದಿನಾಂಕ : 13-08-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ1 ಬಸಪ್ಪ, ಚಾಸಾಃ 10 ಜಯಪಾಲ, ಚಾಸಾಃ 17 ಧನಪಾಲ ಇವರು ನನ್ನ ತಮ್ಮಂದಿರು. ಚಾಸಾಃ 8 ನನಗೆ ಸಂಬಂಧಿಕರು. ಚಾಸಾಃ 9 ವಿವಲವ್ವ ನನ್ನ ತಮ್ಮನ ಹೆಂಡತಿ. ಚಾಸಾಃ 11 ಶಿವಾನಂದ ಬಾವಿಮನಿ ನನ್ನ ಸಂಬಂಧಿಕರು. ಚಾಸಾಃ 12 ಅನೀಲ ನನ್ನ ತಂಗಿಯ ಮಗ. ಚಾಸಾಃ 13 ವಿಠ್ಠಲ ನನ್ನ ಅಣ್ಣ. ಚಾಸಾಃ 14 ರಾಜು, ಚಾಸಾಃ 15 ಮಹಾದೇವ, ಚಾಸಾಃ 18 ಸುಶೀಲವ್ವ, ಚಾಸಾಃ 19 ಸುಂದರವ್ವ, ಚಾಸಾಃ 20 ಕಸ್ತೂರಿ, ಚಾಸಾಃ21 ಶಾಂತವ್ವ, ಚಾಸಾಃ 22 ಅಬಾಯವ್ವ, ಚಾಸಾಃ 23 ಸುಮಿತ್ರಾ, ಚಾಸಾಃ 24 ಮಾಲವ್ವ, ಚಾಸಾಃ 25 ಸುಶೀಲವ್ವಾ, ಚಾಸಾಃ 26 ನೀಲವ್ವಾ, ಚಾಸಾಃ 27 ರುಕ್ಮವ್ವಾ ಚಾಸಾಃ 28ಯಲ್ಲವ್ವಾ, ಚಾಸಾಃ 29 ಹಣಮಂತ, ಚಾಸಾಃ30 ಯಮನಪ್ಪ, ಚಾಸಾಃ 31 ದುರ್ಗಪ್ಪ, ಚಾಸಾಃ 32 ಪ್ರಕಾಶ ನನಗೆ ಸಂಬಂಧದಲ್ಲಿ ಅಣ್ಣತಮ್ಮಂದಿರಾಗಬೇಕು. ಚಾಸಾಃ 33 ಮಿಲನ ಬಾಬು, ಚಾಸಾಃ 34 ಮಲ್ಲು ಕುರಾಡೆ ನನಗೆ ಪರಿಚಯಸ್ಥರಲ್ಲ.

2. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಮುಗಳಖೋಡ ಗ್ರಾಮದವರು ನನಗೆ ಪರಿಚಯ ಇರುತ್ತಾರೆ. ಪಂಚಾಯತಿವರು ಕೊಟ್ಟ ಜಾಗದಲ್ಲಿ ನಮ್ಮ ತಂದೆಯ ಕಾಲದಿಂದ ನಾವು ಇದ್ದೇವೆ ಮತ್ತು ಬಳಸುತ್ತಿದ್ದೇವೆ, ಆ ಜಾಗ ನಮಗೆ ಸೇರಿದ್ದು ಎಂದು ಬಾಬನ್ನ ಮತ್ತು ಆರೋಪಿತರು ನಮಗೆ ಸೇರಿದ್ದು ಎಂದು ತಕರಾರು ಮಾಡುತ್ತಿದ್ದಾರೆ.

3. ರಾಯಬಾಗ ತಹಶೀಲ್ದಾರವರು ಬಂದು ಗಾಂವಠಾಣಾ ಸರ್ಕಾರಿ ಜಾಗ ಎಂದು ಹೇಳಿದ್ದಾರೆ. ಈಗ 6 ವರ್ಷಗಳ ಹಿಂದೆ ಬಾಬನ್ನ ಅವರು ಪಂಚಾಯತಿಯ ಗಾಂವಠಾಣಾ ಜಾಗದಲ್ಲಿ ಕಟ್ಟಡ ಕಟ್ಟುತ್ತಿದ್ದರು, ಪಂಚಾಯತಿ ಅಧಿಕಾರಿಗಳು ಬಂದು ಕಟ್ಟಡ ಕಟ್ಟಬಾರದೆಂದು ಹೇಳಿದರು. ಘಟನಾ ಸಮಯದಲ್ಲಿ ನಾವು ಮನೆಯಲ್ಲಿದ್ದೇವು. ಘಟನೆ ನಡೆಯುವ ಎರಡು ದಿನಗಳ ಮೊದಲು ನಮ್ಮ ತಾಯಿ ತೀರಿಕೊಂಡಿದ್ದರಿಂದ ಜನರು ಬಂದುಹೋಗುತ್ತಿದ್ದರು ಆ ಕಾರಣ ನಾನು ಮನೆಯಲ್ಲಿದ್ದೇವು. ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದಾರೆ ಎನ್ನುವ ವಿಚಾರ ಗೊತ್ತಾಗಿ ನಾನು ಸ್ಥಳಕ್ಕೆ ಹೋದೇನು.

4. ಪ್ರಕಾಶ ಎನ್ನುವವರು ಮಣ್ಣಿನ ಗುಡ್ಡೆಯಿಂದ ಕೆಳಗೆ ಬಿದ್ದರು. ಬಸಪ್ಪ [ಚಾಸಾಃ1], ಲಕ್ಷ್ಮಣ ಕೆಳಗಡೆ [ಚಾಸಾಃ8] ಶ್ರೀಶೈಲ ಕಡಕೋಳ, ಮಾರುತಿ ಕೆಳಗಡೆ ಮತ್ತು ಇತರರು ಪ್ರಕಾಶನನ್ನು ಮೇಲೆ ಎತ್ತಲು ಹೋದರು, ಆ ಸಮಯದಲ್ಲಿ 1ನೇ ಆರೋಪಿ ಬಸಪ್ಪ ಅವರಿಗೆ ಬಿದಿರು ಬಂಬುವಿನಿಂದ ತಲೆಯ ಮೇಲೆ ಹೊಡೆದರು, ಆತನು ಕೆಳಗೆ ಬಿದ್ದನು, ಆತನನ್ನು ಎತ್ತಲು ನಾನು ಹೋದೇನು, ಆ ಸಮಯದಲ್ಲಿ ಅಜಿತ ಬಾಬನ್ನ ಎನ್ನುವವರು ಕಲ್ಲಿನಿಂದ ಬೆನ್ನಿನ ಮೇಲೆ ಹೊಡೆದರು, ಆರೋಪಿತರು ನಮಗೆ ಜಾತಿ ಹೆಸರು ಹಿಡಿದು ಕೆಟ್ಟ ಪದಗಳಿಂದ ಬೈಯುತ್ತಿದ್ದರು, ಹೆಣ್ಣು ಮಕ್ಕಳಿಗೆ ಎಳೆದಾಡುತ್ತಿದ್ದರು, ಒಟ್ಟು 14 ಜನರಿಗೆ ಪೆಟ್ಟಾಯಿತು ಅಂದರೆ ಬಸಪ್ಪ, ನನಗೆ, ಶಿವಾನಂದ [ಚಾಸಾಃ 11], ಜಯಪಾಲ [ಚಾಸಾಃ10], ವಿಠ್ಠಲ [ಚಾಸಾಃ13] ಮತ್ತು ಇತರರಿಗೆ ಗಾಯವಾಗಿತ್ತು, ನಂತರ ನಮ್ಮನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆ ನಂತರ ನಾರಗೊಂಡ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು.

5. ಘಟನೆಯ ಬಗ್ಗೆ ನನ್ನ ತಮ್ಮ ಬಸಪ್ಪ ದೂರು ನೀಡಿದ್ದಾರೆ. ನನಗೆ ಮತ್ತು ಉಳಿದ ಗಾಯಾಳುಗಳಿಗೆ ಕಲ್ಲಿನಿಂದ ಹೊಡೆದ ಗಾಯಗಳಾಗಿದ್ದವು. ಬಿದಿರು ಬಂಬುವನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಿದಿರು ಬಂಬುವನ್ನು ಸಾಕ್ಷಿ ನೋಡಿ ಗುರುತಿಸಿ 1ನೇಆರೋಪಿ, ನನ್ನ ತಮ್ಮ ಬಸಪ್ಪ ಇವರಿಗೆ ಅದರಿಂದ ಹೊಡೆದರು ಎಂದು ಹೇಳಿದ್ದಾರೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ 14 ಕಲ್ಲುಗಳನ್ನು ಗುರುತಿಸಿ, ಅವುಗಳನ್ನು ಪೋಲಿಸರು ಸ್ಥಳದಿಂದ ತೆಗೆದುಕೊಂಡು ಹೋದರು ಎಂದು ಹೇಳಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿದೆ. ಅವುಗಳ ಕೃತ್ಯ ನಡೆದ ಸ್ಥಳದ ರಸ್ತೆಯ ಮೇಲೆ ಇದ್ದವು ಎಂದು ಹೇಳಿದ್ದಾರೆ.

6. ನ್ಯಾಯಾಲಯದಲ್ಲಿ ಹಾಜರಿರುವ 1ನೇ ಆರೋಪಿ ರಾವುಸಾಬ ಬಾಬನ್ನವರವರನ್ನು ಗುರುತಿಸಿ ನನ್ನ ತಮ್ಮ ಬಸಪ್ಪ ಇವರಿಗೆ ಹೊಡೆದರು ಎಂದು ಹೇಳಿದ್ದಾರೆ. ನನಗೆ ಕಲ್ಲಿನಿಂದ ಹೊಡೆದ ಅಜಿತ ಬಾಬನ್ನ ಅವರು ಇಂದು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದು ಹೇಳಿದ್ದಾರೆ. [5ನೇ ಆರೋಪಿ ಅಜಿತ ಬಾಬನ್ನ ಅವರು ಗೈರು ಹಾಜರಾಗಿದ್ದು ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಆರೋಪಿ ಪರ ವಕೀಲರು ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯನ್ನು ಪುರಸ್ಕರಿಸಲಾಗಿದೆ.]

**<u>ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ</u>**

ನಿವೇಶನ ಸಂಖ್ಯೆ 643 ಹಳೇ ಕಾಲದಿಂದ ಬಾಬನ್ನವರ ಕುಟುಂಬಕ್ಕೆ ಸೇರಿದ್ದು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಪಂಚಾಯತಿ ಜಾಗ ಎಂದು ಹೇಳಿದ್ದಾರೆ. ಆ ಬಗ್ಗೆ ನೀವು ದಾಖಲೆ ನೋಡಿದ್ದಿರಾ ಎನ್ನುವುದಕ್ಕೆ ಸಾಕ್ಷಿ ನಾನು ದಾಖಲೆ ನೋಡಿರುವುದಿಲ್ಲ, ಆದರೆ ತಹಶೀಲ್ದಾರವರೇ ಸ್ಥಳಕ್ಕೆ ಬಂದು ಆ ರೀತಿ ಹೇಳಿದ್ದಾರೆ ಎಂದು

ಉತ್ತರಿಸಿದ್ದಾರೆ. ತಹಶೀಲ್ದಾರವರು ಸ್ಥಳಕ್ಕೆ ಬಂದ ಬಗ್ಗೆ ಕಾಗದ ಪತ್ರಗಳು ಇವೆ. ಆ ವಿಚಾರದಲ್ಲಿ ನಾನ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

2. ಬಾಬನ್ನ ಮತ್ತು ಇತರರು ಸೇರಿ ಕಟ್ಟಡ ಕಟ್ಟಲು ಪರವಾನಿಗೆ ಪಡೆದಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ತಹಶೀಲ್ದಾರವರೇ ಕಟ್ಟಡ ಕಟ್ಟಬಾರದು ಎಂದು ಹೇಳಿದ್ದಾರೆ ಎಂದು ಉತ್ತರಿಸಿದ್ದಾರೆ. ಪಂಚಾಯತಿಯವರು ಕಟ್ಟಡ ಕಟ್ಟಲು ಅನುಮತಿ ಕೊಟ್ಟಿದ್ದರು ಎನ್ನುವುದಕ್ಕೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು, ಇ.ಓ ಸಾಹೇಬರು [Executive Officer] ಬಂದು ಕಟ್ಟಡ ಕಟ್ಟಬಾರದು ಎಂದು ಹೇಳಿರುತ್ತಾರೆ.

3. ನಮ್ಮ ಸಮಾಜದವರು ಬಾಬನ್ನವರ ಮೇಲೆ ನಿವೇಶನ ಸಂಖ್ಯೆ 643 ರ ವಿಚಾರವಾಗಿ ರಾಯಬಾಗ ನ್ಯಾಯಾಲಯದಲ್ಲಿ ಸಿವಿಲ್ ಕೇಸ ಮಾಡಿದ್ದಾರೆ ಎನ್ನುವುದು ಸರಿ. ನ್ಯಾಯಾಲಯವು 1ನೇ ಆರೋಪಿಯು ವಿವಾದಿತ ನಿವೇಶನದ ಮಾಲೀಕರೆಂದು ತೀರ್ಮಾನ ಮಾಡಿದೆ ಎನ್ನುವುದು ಸರಿಯಲ್ಲ.

4. ಬೆಂಗಳೂರಿನ ಭೂಕಬಳಿಕೆ ನ್ಯಾಯ ಮಂಡಳಿಗೆ ನನ್ನ ತಮ್ಮ ಅರ್ಜಿ ಕೊಟ್ಟ ವಿಚಾರ ನನಗೆ ಗೊತ್ತಿರುವುದಿಲ್ಲ.

5. ವಿವಾದಿತ ನಿವೇಶನಕ್ಕೆ 1ನೇ ಆರೋಪಿ ಮಾಲೀಕರು ಎನ್ನುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪ್ರಶ್ನೆ:** ಪಂಚಾಯತಿಯವರಿಂದ ಅನುಮತಿ ಪಡೆದು 1ನೇ ಆರೋಪಿ ಬಾಬನ್ನ ಮತ್ತು ಅವರ ಕುಟುಂಬದವರು ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟುತ್ತಿದ್ದರು?
**ಉತ್ತರ:** ಪಂಚಾಯತಿಯವರೇ ಬಂದು ಕಟ್ಟಡ ಕಟ್ಟಬಾರದು ಎಂದು ಹೇಳಿದ್ದಾರೆ.

6. ಘಟನೆ ನಡೆದ ಸಮಯದಲ್ಲಿ ನಾನು ಮನೆಯಲ್ಲಿದ್ದು, ನಂತರ ಪಂಚಾಯತಿ ಸಾಹೇಬರು ಬಂದಿದ್ದಾರೆ ಎಂದು ಗೊತ್ತಾದ ನಂತರ ನಾನು ಸ್ಥಳಕ್ಕೆ ಹೋದೇನು ಎಂದು ಸುಳ್ಳು

ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಘಟನೆ ನಡೆದ ದಿನ 1ನೇ ಆರೋಪಿ ನನ್ನ ತಮ್ಮನಿಗೆ ಹೊಡೆದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸುಳ್ಳು ಹೇಳುತ್ತಿಲ್ಲ ಎಂದು ಹೇಳಿದ್ದಾರೆ.

7. ಇನ್ನೂ 14 ಜನರಿಗೆ ಆರೋಪಿತರು ಹೊಡೆದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 5ನೇ ಆರೋಪಿ ಅಜಿತ ನನಗೆ ಬೆನ್ನಿನ ಮೇಲೆ ಹೊಡೆದನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪ್ರಕಾಶ ಎನ್ನುವವರು ಕಲ್ಲಿನ ಗುಡ್ಡೆಯಿಂದ ಕೆಳಗೆ ಬಿದ್ದಾಗ, ನಾವು ಆತನನ್ನು ಎಬ್ಬಿಸಲು ಹೋದಾಗ ನಮಗೆ ಗಾಯಗಳಾಗಿವೆ ಎನ್ನುವುದು ಸರಿಯಲ್ಲ.

8. ಆರೋಪಿತರು ನಮಗೆ ಜಾತಿ ನಿಂದನೆ ಮಾಡಿ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಘಟನೆಯಲ್ಲಿ ಗಾಯವಾದ 14 ಜನರಿಗೂ ಸಹ ಪ್ರಕಾಶನನ್ನು ಎಬ್ಬಿಸಲು ಹೋಗಿ ಅವರುಗಳೇ ಬಿದ್ದು ಗಾಯ ಮಾಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ಪ್ರಶ್ನೆಃ ನೀವು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೀರಿ?
ಉತ್ತರಃ ಅವರು 300 ಜನರು ಇದ್ದರು, ನಾವು 30–40 ಜನರು ಇದ್ದೇವು, ಅವರಿಗೆ ಹಲ್ಲೆ ಮಾಡಲು ಹೇಗೆ ಸಾಧ್ಯ ಎಂದು ಹೇಳಿದ್ದಾರೆ.

9. ಆರೋಪಿತರು ನನ್ನ ಮೇಲೆ ಕೇಸ ಕೊಟ್ಟಿದ್ದಾರೆ ಎನ್ನುವುದು ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ, ಆರೋಪಿತರ ನಿವೇಶವನ್ನು ಪಡೆದುಕೊಳ್ಳುವ ಸಲುವಾಗಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

10. ನನಗೆ ಯಾವುದೇ ಗಾಯ ಆಗಿರಲಿಲ್ಲ, ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಕಟ್ಟಡ ಕಟ್ಟುವ ಸ್ಥಳದಲ್ಲಿ ಸಾಮಾನ್ಯವಾಗಿ

ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ರಂತಹ ವಸ್ತುಗಳು ಇರುತ್ತವೆ ಎನ್ನುವುದಕ್ಕೆ ಸಾಕ್ಷಿ ಅವುಗಳಿಂದ ನಮಗೆ ಹೊಡೆದಿದ್ದಾರೆ ಎಂದು ಹೇಳಿದ್ದಾರೆ.

**ಪಾಟೀ ಸವಾಲುಃ1 ಮತ್ತು 2ನೇ ಆರೋಪಿತರ ಪರ ಶ್ರೀ. ಎಮ್.ಸಿ.ಕೆ ವಕೀಲರು ಶ್ರೀ. ಬಿ.ಜೆ.ಜಿ. ವಕೀಲರ ಪರವಾಗಿ**

1 ಮತ್ತು 2ನೇ ಆರೋಪಿತರ ಪರ ಶ್ರೀ.ಎಮ್.ಸಿ.ಕೆ ವಕೀಲರು ಶ್ರೀ.ಬಿ.ಜೆ.ಜಿ. ವಕೀಲರ ಪರವಾಗಿ 3 ರಿಂದ 34 ನೇ ಆರೋಪಿತರ ಪರ ಶ್ರೀ.ಎ.ಬಿ.ಬಿ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.